# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 419
2) ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸುವ ದಿನಾಂಕ: : 15.09.2022
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ 2021-22ನೇ ಸಾಲಿನ ಅಂತ್ಯದವರೆಗೆ ಮತ್ತು 2022-23ನೇ ಸಾಲಿನ ಆಗಸ್ಟ್ ಅಂತ್ಯದವರೆಗೆ ಬರಬೇಕಾಗಿದ್ದ ಜಿ.ಎಸ್.ಟಿ ಬಾಕಿ ಮತ್ತು ಪರಿಹಾರ ರೂಪದಲ್ಲಿ ಬರಬೇಕಾಗಿದ್ದ ಮೊತ್ತವೆಷ್ಟು; (ಮಾಹೆಯಾನ ಪೂರ್ಣ ವಿವರ ನೀಡುವುದು)</td><td>ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ 2021-22ನೇ ಸಾಲಿನ ಅಂತ್ಯದವರೆಗೆ ಮತ್ತು 2022-23ನೇ ಸಾಲಿನ ಆಗಸ್ಟ್ ಅಂತ್ಯದವರೆಗೆ ಬರಬೇಕಾಗಿದ್ದ ಜಿ.ಎಸ್.ಟಿ. ಬಾಕಿ ಮತ್ತು ಪರಿಹಾರ ರೂಪದಲ್ಲಿ ಬರಬೇಕಾಗಿದ್ದ ಮೊತ್ತದ ಮಾಹೆಯಾನ ವಿವರ ಈ ಕೆಳಕಂಡಂತೆ ಇರುತ್ತದೆ.
<table>
<tr><th>ಅವಧಿ</th><th colspan="2">ಮೊತ್ತ (ಕೋಟಿಗಳಲ್ಲಿ)</th></tr>
<tr><td>ಡಿಸೆಂಬರ್-2020 & ಜನವರಿ-2021</td><td>488.69</td><td></td></tr>
<tr><td>ಫೆಬ್ರವರಿ-2021 & ಮಾರ್ಚ್-2021</td><td>3312.24</td><td></td></tr>
<tr><td>ಫೆಬ್ರವರಿ-2022 & ಮಾರ್ಚ್-2022</td><td>2385.39</td><td>6186.32</td></tr>
<tr><td>ಏಪ್ರಿಲ್-2022 & ಮೇ-2022</td><td>5686.41</td><td></td></tr>
<tr><td>ಜೂನ್-2022</td><td>2307.39</td><td>7993.80</td></tr>
<tr><td>ಒಟ್ಟು</td><td></td><td>14180.12</td></tr>
</table></td></tr>
<tr><td>ಆ)</td><td>ರಾಜ್ಯಕ್ಕೆ ಕೇಂದ್ರ ಸರ್ಕಾರ 2020-21 ಮತ್ತು 2021-22ನೇ ಸಾಲಿನಲ್ಲಿ ಪ್ರತಿ ಮಾಹೆಯಾನ ಜಿ.ಎಸ್.ಟಿ ಕಂತುಗಳ ಮೊತ್ತವೆಷ್ಟು; ಬಿಡುಗಡೆಗೆ ಬಾಕಿ ಉಳಿದಿರುವ ಮೊತ್ತವೆಷ್ಟು; ಮತ್ತು ಕೇಂದ್ರ ಸರ್ಕಾರ ಬಾಕಿ ಉಳಿದಿರುವ ಜಿ.ಎಸ್.ಟಿ ಮಾಹೆಯಾನ ಕಂತುಗಳ ಮೊತ್ತ ಮತ್ತು ಜಿ.ಎಸ್.ಟಿ ಪರಿಹಾರವನ್ನು ಯಾವ ರೂಪದಲ್ಲಿ ತಹಲ್‌ವರೆಗೂ ನೀಡಿದೆ; (ಪೂರ್ಣ ವಿವರವನ್ನು ನೀಡುವುದು)</td><td>2020-21 ಮತ್ತು 2021-22ನೇ ಸಾಲಿನಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಬಿಡುಗಡೆ ಮಾಡಿದ ಜಿ.ಎಸ್.ಟಿ. ಪರಿಹಾರ ಮತ್ತು ಸಾಲದ ಮಾಹೆವಾರು ವಿವರ ಈ ಕೆಳಕಂಡಂತೆ ಇರುತ್ತದೆ.
<table>
<tr><th rowspan="2">ಅವಧಿ</th><th>ಪರಿಹಾರ</th><th>ಒಟ್ಟು</th><th>ಪರಿಹಾರ ಸಾಲ</th><th>ಒಟ್ಟು</th></tr>
<tr><th colspan="4">(ರೂ.ಕೋಟಿಗಳಲ್ಲಿ)</th></tr>
<tr><td>ಏಪ್ರಿಲ್-20</td><td>1536.83</td><td></td><td>0</td><td></td></tr>
<tr><td>ಜೂನ್-20</td><td>4314.13</td><td></td><td>0</td><td></td></tr>
<tr><td>ಜುಲೈ-20</td><td>1414.87</td><td></td><td>0</td><td></td></tr>
<tr><td>ಅಕ್ಟೋಬರ್-20</td><td>1776.65</td><td></td><td>940.80</td><td></td></tr>
<tr><td>ನವೆಂಬರ್-20</td><td>0</td><td></td><td>2670.37</td><td></td></tr>
<tr><td>ಡಿಸೆಂಬರ್-20</td><td>1776.65</td><td></td><td>3408.06</td><td></td></tr>
<tr><td>ಜನವರಿ-21</td><td>0</td><td></td><td>2701.84</td><td></td></tr>
<tr><td>ಫೆಬ್ರವರಿ-21</td><td>0</td><td></td><td>2211.75</td><td></td></tr>
<tr><td>ಮಾರ್ಚ್-21</td><td>2970.12</td><td>13789.25</td><td>474.18</td><td>12407.00</td></tr>
<tr><td>ಜೂನ್-21</td><td>1774.64</td><td></td><td>0</td><td></td></tr>
<tr><td>ಜುಲೈ-21</td><td>0</td><td></td><td>8542.17</td><td></td></tr>
<tr><td>ಸೆಪ್ಟೆಂಬರ್-21</td><td>2070.72</td><td></td><td>0</td><td></td></tr>
<tr><td>ಅಕ್ಟೋಬರ್-21</td><td>0</td><td></td><td>9566.74</td><td></td></tr>
<tr><td>ನವೆಂಬರ್-21</td><td>1602.62</td><td></td><td>0</td><td></td></tr>
<tr><td>ಜನವರಿ-22</td><td>1710.38</td><td></td><td>0</td><td></td></tr>
<tr><td>ಮಾರ್ಚ್-22</td><td>1818.08</td><td>8976.44</td><td>0</td><td>18108.91</td></tr>
<tr><td>ಒಟ್ಟು</td><td></td><td>22765.69</td><td></td><td>30515.91</td></tr>
</table>
ಬಿಡುಗಡೆಗೆ ಬಾಕಿ ಇರುವ ಮೊತ್ತ:<br>
2020-21 : ರೂ.3800.93 ಕೋಟಿಗಳು<br>
2021-22 : ರೂ.2385.39 ಕೋಟಿಗಳು</td></tr>
</table>

| | | |
|---|---|---|
| ಇ) | ರಾಜ್ಯಗಳು ಪ್ರತಿ ವರ್ಷವು ಜಿ.ಎಸ್.ಟಿ ಸಂಗ್ರಹಣೆಯಲ್ಲಿ ಕೊರತೆಯನ್ನು ಅನುಭವಿಸುತ್ತಿದ್ದು, ಈ ಕೊರತೆಯನ್ನು ತುಂಬಲು ಕೇಂದ್ರ ಸರ್ಕಾರ ಜಿ.ಎಸ್.ಟಿ (ರಾಜ್ಯಗಳಿಗೆ ಪರಿಹಾರ) ಕಾಯ್ದೆ–2017ರ ಅವಧಿಯನ್ನು 5 ವರ್ಷಗಳ ಕಾಲ ವಿಸ್ತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು; | ರಾಜ್ಯಕ್ಕೆ ಕೇಂದ್ರದಿಂದ ನೀಡಲಾಗುತ್ತಿದ್ದ ಜಿ.ಎಸ್.ಟಿ ಪರಿಹಾರವು ಜೂನ್ 2022ಕ್ಕೆ ಮುಕ್ತಾಯಗೊಂಡಿರುತ್ತದೆ. ಜಿ.ಎಸ್.ಟಿ. ಪರಿಹಾರವನ್ನು ಮುಂದಿನ 5 ವರ್ಷಗಳಿಗೆ ವಿಸ್ತರಿಸುವಂತೆ ಮಾನ್ಯ ಮುಖ್ಯಮಂತ್ರಿಯವರು ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಆದರೆ, ಕೇಂದ್ರ ಸರ್ಕಾರದಿಂದ ಮತ್ತು ಜಿ.ಎಸ್.ಟಿ. ಮಂಡಳಿಯಿಂದ ಈವರೆಗೂ ಜಿ.ಎಸ್.ಟಿ. ಪರಿಹಾರ ವಿಸ್ತರಣೆ ಬಗ್ಗೆ ಯಾವುದೇ ನಿರ್ಧಾರವಾಗಿರುವುದಿಲ್ಲ. |
| ಈ) | ಕೇಂದ್ರ ಸರ್ಕಾರ ಒಂದು ವೇಳೆ ಜಿ.ಎಸ್.ಟಿ ಪರಿಹಾರ ಕಾಯಿದೆಯನ್ನು ವಿಸ್ತರಿಸಿದ್ದರೂ ಕೇಂದ್ರ ಸರ್ಕಾರ ಸೆಸ್ ಕಾಯಿದೆಯಡಿಯಲ್ಲಿ ಸಂಗ್ರಹಿಸುವ ತೆರಿಗೆಯನ್ನು ಈ ಹಿಂದೆ ರಾಜ್ಯಗಳ ಪರವಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ ತೆಗೆದುಕೊಂಡಿರುವ ಸಾಲಗಳ ತೀರುವಳಿಗೆ ಉಪಯೋಗಿಸಿಕೊಂಡರೆ, ರಾಜ್ಯಕ್ಕೆ ತೆರಿಗೆ ಸಂಗ್ರಹದಲ್ಲಿ ಭಾರಿ ಕೊರತೆ ಬೀಳುವುದು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ರಾಜ್ಯ ಸರ್ಕಾರ ತೆರಿಗೆ ಸಂಗ್ರಹಣೆಗೆ ಕೈಗೊಂಡಿರುವ ಪರ್ಯಾಯ ಕ್ರಮಗಳು ಯಾವುವು; (ಪೂರ್ಣ ವಿವರ ನೀಡುವುದು) | ಮೇಲಿನ ಉತ್ತರದಿಂದ ಉದ್ಭವಿಸುವುದಿಲ್ಲ. |
| ಉ) | ಕೇಂದ್ರದ 15ನೇ ಹಣಕಾಸು ಆಯೋಗವು 2022–23ರ ನಂತರ ರಾಜ್ಯಗಳಿಗೆ ನಿಯೋಜಿಸಿದ ತೆರಿಗೆಗಳ ನಂತರ ಬೀಳಬಹುದಾದ ರಾಜಸ್ವ ಕೊರತೆಯನ್ನು ನೀಗಿಸಲು ನೀಡಬೇಕಾದ ಅನುದಾನವನ್ನು (Post Devolution Revenue Deficit Grant) ಶಿಫಾರಸ್ಸು ಮಾಡಿಲ್ಲದಿರುವುದರಿಂದ, ಇದನ್ನು ಪಡೆಯಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಕೇಂದ್ರದ 15ನೇ ಹಣಕಾಸು ಆಯೋಗದ ಶಿಫಾರಸ್ಸಿನ ಮೇರೆಗೆ 2021–22ನೇ ಸಾಲಿಗೆ ರಾಜಸ್ವ ಕೊರತೆಯನ್ನು ನೀಗಿಸಲು ಅನುದಾನವನ್ನು ನೀಡಲಾಗಿರುತ್ತದೆ. 2022–23ನೇ ಸಾಲಿಗೆ ರಾಜ್ಯದಲ್ಲಿ ರಾಜಸ್ವ ಕೊರತೆ ಉಂಟಾದಲ್ಲಿ Post Devolution Revenue Deficit Grantನ್ನು ಕೋರಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. |

ಸಂಖ್ಯೆ: ಆಇ 66 ಸಿಎಸ್‌ಎಲ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ